# ಮನುಜ ಶರೀರವಿದೇನು ಸುಖ

1. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 381.
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 437.
3. **Ref.:** Shri Purandara Dasara Sahitya Part – 5, Loka Neeti, edited by Shri Betageri Krishna Sharma and Shri Bengeri Huchha Rayaru, page No. 52.
4. **Ref.:** Samagra Dasa Sahitya, Samputa 3.2 published by Kannada & Culture Dept, Govt of Karnataka, Bengaluru, page No. 193.
5. **Note:** Lyrics given here are as per Ref. 1. The wordings in other references are same or almost same as in Ref. 1 with few minor variations which are not considered here.
6. **Note:** Singer has followed these lyrics.

ರಾಗ: ಶಂಕರಾಭರಣ ತಾಳ: ಆದಿ

ಮನುಜ ಶರೀರವಿದೇನು ಸುಖ, ಇದ
ನೆನೆದರೆ ಘೋರವಿದೇನು ಸುಖ || ಪ ||

ಜನನ ಮರಣ ಮಲದ ಕೂಪದಲಿದ್ದು
ಅನುಭವಿಸುವುದು ಇದೇನು ಸುಖ
ತನುವಿದ್ದಾಗಲೆ ಹೃದಯದ ಶೌಚದ
ಸ್ತನಗಳಂಬುವುದೇನು ಸುಖ || 1 ||

ದಿನ ದಿನ ಹಸಿ ತೃಷೆ ಘನ ಘನ ರೋಗದೊ
ಳನುಭವಿಸುವುದು ಅದೇನು ಸುಖ
ನೆನೆಯಲು ನಿತ್ಯ ನಿರ್ಗುಳ್ಳೆಯಂತಿಪ್ಪ
ತನು ಮಲ ಭಾಂಡವಿದೇನು ಸುಖ || 2 ||

ಪರಿಪರಿ ವಿಧದಲಿ ಪಾಪವ ಗಳಿಸುತ

ನರಕಕೆ ಬೀಳುವುದೇನು ಸುಖ
ಪುರಂದರ ವಿಠಲನ ಮನದಿ ನೆನೆದು ಸದ್-
ಧರ್ಮದೊಳ್ ನಡೆದರೆ ಆಗ ಸುಖ || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಭಕ್ತಿ ಸಾಧಕನು ಮೊದಲು ಅರಿತುಕೊಳ್ಳಬೇಕಾದದ್ದು ತನ್ನ ದೇಹದ ನಶ್ವರತೆಯ ವಿಚಾರವನ್ನು; ಜನನ ಮರಣಗಳ ದುಃಖಗಳನ್ನು. ಎಂತಲೆ ಈ ಬಗೆಯ ಅನೇಕ ಹಾಡುಗಳನ್ನು ರಚಿಸಿ ಭೋದಿಸಿದ್ದಾರೆ.

**ಅಶೌಚ** = ಹೊಲಸು, ಶುಚಿ ಇಲ್ಲದ್ದು

**ತನುವಿದ್ದಾಗಲೇ .... ಏನು ಸುಖ :** ಜೀವಿಸಿರುವಾಗಲೇ ದೇಹವಿದ್ದೂ ಹೃದಯ ಶುಚಿ ಇಲ್ಲದಿದ್ದರೆ ಅದರಿಂದಾಗುವ ಕಟು ಫಲಗಳನ್ನು ಉಂಬುವುದರಲ್ಲಿ ಯಾವ ಸುಖವಿದೆಯೆಂದು ದಾಸರು ಕೇಳಿದ್ದಾರೆ.

**ಘೋರ** – ಭಯಂಕರ, ಭಯವನ್ನುಂಟುಮಾಡುವುದು.

**ಕೂಪ** – ಬಾವಿ.

**ತೃಷೆ** – ಬಾಯಾರಿಕೆ.

**ತನು ಮಲಭಾಂಡ** – ಶರೀರವೆನ್ನುವುದು ಕೊಳೆಗಳ ಮಡಕೆ

**Classification:** Keerthane
**Ankita:** purandara vittala
**Location:** NA
**Category:** Loka Neeti, Vairagya, Virakti.
**Sub-Category:** nara, deha, sukha, huttu, marana, hrudaya, dina, anubhava, niru, papa, naraka, dharma, mana,
**Pravachana:** NA
**Explanation:** NA